"ಅನುಸೂಚಿ

(ಪ್ರಕರಣ 3(2)ನ್ನು ನೋಡಿ)

**ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆಯ ದರಗಳು**

| ಕ್ರಮ ಸಂಖ್ಯೆ | ವ್ಯಕ್ತಿಗಳ ವರ್ಗ | ತೆರಿಗೆಯ ದರ |
|---|---|---|
| (1) | (2) | (3) |
| 1 | ಒಂದು ತಿಂಗಳಿಗೆ ರೂ. 25,000-00 ಮತ್ತು ಹೆಚ್ಚಿನ ಸಂದರ್ಭಾನುಸಾರ, ಸಂಬಳ ಅಥವಾ ಮಜೂರಿಯನ್ನು ಅಥವಾ ಇವೆರಡನ್ನೂ ಪಡೆಯುವ ವ್ಯಕ್ತಿಗಳು | ತಿಂಗಳಿಗೆ ರೂ.200-00 |
| 2 | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 ರಡಿಯಲ್ಲಿ ನೋಂದಾಯಿಸಿದ ಅಥವಾ ನೋಂದಣಿ ಪಡೆಯಲು ಬಾಧ್ಯರಾಗಿರುವ ವ್ಯಕ್ತಿಗಳು | ವರ್ಷಕ್ಕೆ ರೂ.2,500-00 |
| 3 | ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳಲ್ಲಿ, ಎರಡು ವರ್ಷಗಳಿಗಿಂತ ಹೆಚ್ಚು ಕಾಲ ತೊಡಗಿಸಿಕೊಂಡಿರುವ ಸ್ವಯಂ ಉದ್ಯೋಗಿಗಳು ಒಳಗೊಂಡಂತೆ ಕಾನೂನು ವೃತ್ತಿಗಾರರು, ಸಲಹೆಗಾರರು, ಏಜೆಂಟ್‌ಗಳು, ಚಾರ್ಟೆಂಡ್ ಅಕೌಂಟೆಂಟ್‌ಗಳು ಮತ್ತು ಆಕಸ್ಮಿಕ ವಿಮಾ ಕೇಂದ್ರಗಳು, ಇಂಜಿನಿಯರ್‌ಗಳು, ಆರೋಗ್ಯಪಾಲನಾ ವೃತ್ತಿಪರರು, ಎಸ್ಟೇಟ್ ಏಜೆಂಟ್‌ಗಳು ಅಥವಾ ದಳ್ಳಾಳಿಗಳು, ಬ್ಯೂಟಿ ಪಾರ್ಲರ್‌ಗಳು, ಡ್ರೈಕ್ಲೀನರ್ಸ್ ಮತ್ತು ಆಂತರಿಕ ವಿನ್ಯಾಸಕಾರರು, ಪತ್ರಕರ್ತಕರುಗಳು ಮತ್ತು ಜಾಹೀರಾತು ಏಜೆನ್ಸಿಗಳು. ಡಿಶ್ ಆಂಟೆನಾ ಕೇಬಲ್ ಟಿವಿ ಬಳಸಿ ಮನರಂಜನೆಯನ್ನು ಒದಗಿಸುವವರು, ಸೆಲ್ಲಿಂಗ್ ಟೈಮ್ ಗಣಕಯಂತ್ರ ಸಂಸ್ಥೆಗಳು, ಗಣಕಯಂತ್ರ ತರಬೇತಿ ಸಂಸ್ಥೆಗಳು / ಚಾಲನಾ ಸಂಸ್ಥೆಗಳು / ತಾಂತ್ರಿಕ ತರಬೇತಿ ಸಂಸ್ಥೆಗಳು, ಜ್ಯೋತಿಷಿಗಳು, ಖಗೋಳ ಶಾಸ್ತ್ರಜ್ಞರು, ಸಂಖ್ಯಾ ಶಾಸ್ತ್ರಜ್ಞರು, ವಾಸ್ತು ಸಲಹೆಗಾರರು ಮತ್ತು ನಂಬಿಕೆ ವೈದ್ಯರು. | ವರ್ಷಕ್ಕೆ ರೂ.2,500-00 |
| 4 | ಕುದುರೆಗಳ ಮಾಲೀಕರು ಮತ್ತು ತರಬೇತಿದಾರರು, ಜಾಕಿಗಳು, ನಿರ್ದೇಶಕರು, ನಟ ಮತ್ತು ನಟಿಯರು (ಕಿರಿಯ ಕಲಾವಿದರನ್ನು ಹೊರತುಪಡಿಸಿ), ಎಣ್ಣೆ ಪಂಪ್‌ಗಳು ಮತ್ತು ಸೇವಾ ಕೇಂದ್ರಗಳು, ಗ್ಯಾಸ್ ಸ್ಟೇಷನ್‌ಗಳು, ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್‌ಗಳ ಮಾಲೀಕರು. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವುದನ್ನು ಹೊರತುಪಡಿಸಿ, ಶುಶ್ರೂಶಕ ನಿಲಯಗಳು, ಆಸ್ಪತ್ರೆಗಳು, ರೋಗ ನಿರ್ಣಯ ಕೇಂದ್ರಗಳು, ಕ್ಲಿನಿಕಲ್ ಲ್ಯಾಬೋರೇಟರಿಗಳು ಮತ್ತು ಎಕ್ಸ್‌ರೇ ಕ್ಲಿನಿಕ್‌ಗಳ ಮಾಲೀಕರು. ದೈಹಿಕ ವ್ಯಾಯಾಮ ಮತ್ತು ಸುಸ್ಥಿತಿ ಕೇಂದ್ರಗಳ ಮಾಲೀಕರು | ವರ್ಷಕ್ಕೆ ರೂ.2,500-00 |
| 5 | ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವುದನ್ನು ಹೊರತುಪಡಿಸಿ, ಶಿಕ್ಷಣ ಸಂಸ್ಥೆಗಳು ಮತ್ತು ಟ್ಯೂಟೋರಿಯಲ್ ಕಾಲೇಜುಗಳು ಅಥವಾ ಸಂಸ್ಥೆಗಳು. | ವರ್ಷಕ್ಕೆ ರೂ.2,500-00 |
| 6 | ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961ರ ಅಡಿಯಲ್ಲಿ ಪರಿಭಾಷಿಸಲಾದ ಸಂಸ್ಥೆಗಳ ನಿಯೋಜಕರು, ಐದಕ್ಕಿಂತ ಹೆಚ್ಚು ನಿಯೋಜಿತರನ್ನು ನೇಮಿಸಿಕೊಂಡಿದ್ದರೆ. | ವರ್ಷಕ್ಕೆ ರೂ.2,500-00 |
| 7 | ಮದ್ಯದ ಪರವಾನಿಗೆ ಪಡೆದ ವಿತರಕರು, ಕರ್ನಾಟಕ ಲೇವಾದೇವಿಗಾರರ ಅಧಿನಿಯಮದ ಪರವಾನಗಿ ಪಡೆದ ಲೇವಾದೇವಿಗಾರರು, ಚಿಟ್‌ಫಂಡ್ ನಡೆಸುತ್ತಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳು. | ವರ್ಷಕ್ಕೆ ರೂ.2,500-00 |

| | | |
|---|---|---|
| 8 | ಸ್ವಂತ ಅಥವಾ  ಬಾಡಿಗೆಗೆ ಉಪಯೋಗಿಸಲಾಗುವ, ಮೋಟಾರು ವಾಹನಗಳ ಅಧಿನಿಯಮ 1988ರ ಮೇರೆಗೆ ಸಾರಿಗೆ ವಾಹನಗಳ ಬಗ್ಗೆ ಕೊಡಲಾದ ಅನುಮತಿ ಪತ್ರಗಳನ್ನು ಹೊಂದಿರುವ, ಸಾರಿಗೆ ವಾಹನಗಳ ಮಾಲೀಕರು (ಆಟೋರಿಕ್ಷಾಗಳನ್ನು ಹೊರತುಪಡಿಸಿ). ಸರಕುಗಳ ಸಾರಿಗೆ ಏಜನ್ಸಿಗಳು (ಜಿಟಿಎ) ಮತ್ತು ಸಾರಿಗೆ ಗುತ್ತಿಗೆದಾರರು ಒಳಗೊಂಡಂತೆ ರವಾನೆ ಮತ್ತು ತೀರಿಕೆ ಏಜೆಂಟರು /ಸರಕು ಬಿಡುಗಡೆ ಮಾಡುವ ಏಜೆಂಟರು<br>ವಿವರಣೆ– ಈ ನಮೂದಿನ ಉದ್ದೇಶಕ್ಕಾಗಿ, ಸರಕುಗಳ ಸಾರಿಗೆ ಏಜನ್ಸಿ ಅಥವಾ ಜಿಟಿಎ ಎಂದರೆ ರಸ್ತೆಯ ಮೂಲಕ ಸರಕುಗಳ ಸಾಗಾಣಿಕೆಗೆ ಸಂಬಂಧಿಸಿದಂತೆ, ಸೇವೆಯನ್ನು ಒದಗಿಸುವ ಮತ್ತು ಯಾವುದಾದರೂ ಹೆಸರಿನಿಂದ ಕರೆಯಲಾಗುವ ರವಾನೆ ಪತ್ರವನ್ನು ನೀಡುವ ಯಾವುದೇ ವ್ಯಕ್ತಿ. | ವರ್ಷಕ್ಕೆ ರೂ.2,500–00 |
| 9 | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಮೇರೆಗೆ ನೋಂದಾಯಿತವಾದ ಮತ್ತು ಯಾವುದೇ ವೃತ್ತಿಗಳ, ಕಸುಬುಗಳ ಅಥವಾ ಆಜೀವಿಕೆಗಳಲ್ಲಿ ತೊಡಗಿರುವ ಸಹಕಾರಿ ಸಂಘಗಳು | ವರ್ಷಕ್ಕೆ ರೂ.2,500–00 |
| 10 | ಕಂಪನಿಗಳ ಅಧಿನಿಯಮ, 2013ರ ಮೇರೆಗೆ ನೋಂದಾಯಿತವಾದ ಮತ್ತು ಯಾವುದೇ ವೃತ್ತಿಗಳ, ಕಸುಬುಗಳ ಅಥವಾ  ಆಜೀವಿಕೆಗಳಲ್ಲಿ ತೊಡಗಿರುವ ಕಂಪನಿಗಳು; ಬ್ಯಾಂಕಿಂಗ್ ವಿನಿಮಯದ ಅಧಿನಿಯಮ, 1949ರಲ್ಲಿ ಪರಿಭಾಷಿಸಲಾದ ಬ್ಯಾಂಕಿಂಗ್ ಕಂಪನಿಗಳು. ವಿವರಣೆ.– ಈ ನಮೂದಿನ ಉದ್ದೇಶಕ್ಕಾಗಿ, "ಬ್ಯಾಂಕಿಂಗ್ ಕಂಪನಿಗಳು" ಎಂದರೆ, ಯಾವುದೇ ಬ್ಯಾಂಕನ್ನು ಒಳಗೊಂಡಂತೆ, ಅದರ ಕಾರ್ಯಚರಣೆಗಳು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (1949ರ ಕೇಂದ್ರ ಅಧಿನಿಯಮ10)ರ ನಿಬಂಧನೆಗಳಿಂದ ನಿಯಂತ್ರಿಸಲ್ಪಟ್ಟಿರುವುದು. | ವರ್ಷಕ್ಕೆ ರೂ.2,500–00 |
| 11 | ಹಿಂದಿನ ಯಾವುದೇ ನಮೂದುಗಳಲ್ಲಿ ನಮೂದಿಸಿರುವ ವ್ಯಕ್ತಿಗಳನ್ನು ಹೊರತುಪಡಿಸಿ, ಯಾವುದೇ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಅಥವಾ ಉದ್ಯೋಗಗಳಲ್ಲಿ ನಿರತರಾಗಿರುವ ಮತ್ತು ಆದಾಯ ತೆರಿಗೆ ಕಾಯ್ದೆ, 1961 (1961ರ ಕೇಂದ್ರ ಕಾಯ್ದೆ 43)ರ ಅಡಿಯಲ್ಲಿ ತೆರಿಗೆ ಪಾವತಿಸುತ್ತಿರುವ ವ್ಯಕ್ತಿಗಳು | ವರ್ಷಕ್ಕೆ ರೂ.2,500–00 |
| 12 | ಹಿಂದಿನ ಯಾವುದೇ ನಮೂದುಗಳಲ್ಲಿ ನಮೂದಿಸಿದ ವ್ಯಕ್ತಿಗಳನ್ನು ಹೊರತುಪಡಿಸಿ, ಕನಿಷ್ಠ ಎರಡು ವರ್ಷಗಳ ಕಾಲಾವಧಿಯೊಂದಿಗೆ ಯಾವುದೇ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಅಥವಾ ಉದ್ಯೋಗಗಳಲ್ಲಿ ನಿರತರಾಗಿರುವ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಅಧಿಸೂಚನೆಯಲ್ಲಿ ವಿನಾಯಿತಿಯನ್ನು ಪಡೆಯದಿರುವ ವ್ಯಕ್ತಿಗಳು. | ವರ್ಷಕ್ಕೆ ರೂ.2,500–00 |

**ವಿವರಣೆ I. -** ಈ ಅನುಸೂಚಿಯಲ್ಲಿ ಏನೇ ಇದ್ದರೂ, ಒಬ್ಬ ವ್ಯಕ್ತಿಯು ಅನುಸೂಚಿಯಲ್ಲಿ ಒಂದಕ್ಕಿಂತ ಹೆಚ್ಚು ನಮೂದುಗಳಲ್ಲಿ ಸೇರಿದ್ದರೆ, ಅಂತಹ ಯಾವುದೇ ನಮೂದುಗಳ ಅಡಿಯಲ್ಲಿ ತೆರಿಗೆಯನ್ನು ಪಾವತಿಸತಕ್ಕದ್ದು.

**ವಿವರಣೆ II. -** ಈ ಅನುಸೂಚಿಯಲ್ಲಿ 4ನೇ ಕ್ರಮ ಸಂಖ್ಯೆಯ ಪ್ರಕಾರ ತೆರಿಗೆಯ ಹೊಣೆಗಾರಿಕೆಯನ್ನು ನಿರ್ಧರಿಸುವ ಉದ್ದೇಶಗಳಿಗಾಗಿ, ವರ್ಷದ ಯಾವುದೇ ಕಾಲದಲ್ಲಿರುವ ಕೆಲಸಗಾರರ ಮತ್ತು /ಅಥವಾ ನಿಯೋಜಿತರ ಅತ್ಯಂತ

ಹೆಚ್ಚಿನ ಸಂಖ್ಯೆಯನ್ನು ಆಧಾರವೆಂದು ಪರಿಗಣಿಸತಕ್ಕದ್ದು.

**ವಿವರಣೆ III.** – ಈ ಅನುಸೂಚಿಯ ಉದ್ದೇಶಗಳಿಗಾಗಿ, ಯಾವುದೇ ಆಸ್ತಿಯನ್ನು, ಗುತ್ತಿಗೆದಾರರಿಂದ ಗುತ್ತಿಗೆಗೆ ಪಡೆದಿದ್ದಲ್ಲಿ, ಹಾಗೆ ಗುತ್ತಿಗೆಗೆ ಪಡೆದವನನ್ನು ಈ ಅಧಿನಿಯಮದ ಮೇರೆಗೆ ಹೊಣೆಗಾರನಾದ ವ್ಯಕ್ತಿ ಎಂದು ಭಾವಿಸತಕ್ಕದ್ದು."

**ವಿವರಣೆ IV.** – ಯಾವುದೇ ವೃತ್ತಿ, ಕಸುಬುಗಳ ಅಥವಾ ಆಜೀವಿಕೆಗಳಲ್ಲಿ ತೊಡಗಿರುವ ಸಂಸ್ಥೆಯ ಯಾವುದೇ ಪಾಲುದಾರರ ಮೇಲೆ, ಅಂತಹ ಸಂಸ್ಥೆಯು ತೆರಿಗೆಯನ್ನು ಪಾವತಿಸಿದ್ದರೆ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯನ್ನು ವಿಧಿಸಲಾಗುವುದಿಲ್ಲ.

**ವಿವರಣೆ V.** - ಈ ಅನುಸೂಚಿಯಲ್ಲಿ ಏನೇ ಇದ್ದರೂ, ಅನುಸೂಚಿಯ ಯಾವುದೇ ಅಂಶದಲ್ಲಿ ನಮೂದಿಸಲಾದ ವ್ಯಕ್ತಿಯ ಹೆಚ್ಚುವರಿ ಸ್ಥಳವನ್ನು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವೃತ್ತಿ ತೆರಿಗೆಯನ್ನು ವಿಧಿಸುವ ಉದ್ದೇಶಕ್ಕಾಗಿ, ಪ್ರತ್ಯೇಕ ವ್ಯಕ್ತಿ ಎಂದು ಪರಿಗಣಿಸತಕ್ಕದ್ದು ಮತ್ತು ಸರಕುಗಳನ್ನು ಸಂಗ್ರಹಿಸಲು ಗೋದಾಮು ಆಗಿ ಪ್ರತ್ಯೇಕವಾಗಿ ಬಳಸಲಾಗುವ ಹೆಚ್ಚುವರಿ ವ್ಯಾಪಾರ ಸ್ಥಳಗಳಿಗೆ ಈ ವಿವರಣೆಯಲ್ಲಿರುವ ಯಾವುದೂ ಅನ್ವಯಿಸತಕ್ಕದ್ದಲ್ಲ.

*******